# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ ಯೋಜನೆಯನ್ನು 2018-19ನೇ ಸಾಲಿನಿಂದ ಜಾರಿಗೆ ತರಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/74/ಪಂವಾಯೋ/2018,
ದಿನಾಂಕ: 21-07-2018.

ಬಂದಿದೆ 6/9/18

******

## ಪ್ರಸ್ತಾವನೆ:

ರಾಜ್ಯ ಸರ್ಕಾರವು 2018-19 ನೇ ಸಾಲಿನ ಜುಲೈ-2018ರ ಆಯವ್ಯಯ ಭಾಷಣದ ಕಂಡಿಕೆ-43 ರಲ್ಲಿ "ರಾಜ್ಯದ 20,000 ಹೆಕ್ಟೇರ್ ಜಲಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ 4 ಕೋಟಿ ರೂ. ವೆಚ್ಚದಲ್ಲಿ 4 ಕೋಟಿ ಮೀನುಮರಿಗಳನ್ನು ಬಿತ್ತನೆ ಮಾಡಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಎಂಬ ಹೊಸ ಕಾರ್ಯಕ್ರಮವನ್ನು ಲೆಕ್ಕ ಶೀರ್ಷಿಕೆ 2405-00-101-0-03-ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ ಅನುಬಂಧದಲ್ಲಿ ನೀಡಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲು ಕೋರುತ್ತಾ, ಈ ಯೋಜನೆಗೆ ತಗಲುವ ವೆಚ್ಚವನ್ನು 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-101-ಒಳನಾಡು ಮೀನುಗಾರಿಕೆಗಳು-0-03-ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ-106-ಸಹಾಯಧನ ಯೋಜನೆಯಡಿ ಹೆಚ್ಚುವರಿ ಅನುದಾನ ರೂ.400.00 ಲಕ್ಷಗಳನ್ನು ಒದಗಿಸಿ ಯೋಜನೆಯ ಅನುಷ್ಠಾನಕ್ಕೆ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 109 ಮೀಇಯೋ 2018, ಬೆಂಗಳೂರು ದಿನಾಂಕ: 05-09-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19 ನೇ ಸಾಲಿನ ಜುಲೈ-2018ರ ಆಯವ್ಯಯ ಭಾಷಣದ ಕಂಡಿಕೆ-43 ರಲ್ಲಿನ "ರಾಜ್ಯದ 20,000 ಹೆಕ್ಟೇರ್ ಜಲಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ

ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ರೂ.4.00 ಕೋಟಿ (ನಾಲ್ಕು ಕೋಟಿ ರೂಪಾಯಿಗಳು ಮಾತ್ರ)ಗಳ ವೆಚ್ಚದಲ್ಲಿ 4 ಕೋಟಿ ಮೀನುಮರಿಗಳನ್ನು ಬಿತ್ತನೆ ಮಾಡಲಾಗುವುದು" ಎಂಬ ಹೊಸ ಕಾರ್ಯಕ್ರಮವನ್ನು ಈ ಆದೇಶದಲ್ಲಿ ಅನುಬಂಧ-1-2 ರಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು, ಮೀನುಗಾರಿಕೆ ನಿರ್ದೇಶಕರು ಕೆ.ಟಿ.ಪಿ.ಪಿ. ಕಾಯಿದೆ ಮತ್ತು ನಿಯಮಗಳನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಸದರಿ ವೆಚ್ಚವನ್ನು 2018-19ನೇ ಸಾಲಿನ ಲೆಕ್ಕ ಶೀರ್ಷಿಕೆ 2405-00-101-0-03-106ರಡಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಸದರಿ ಕಾರ್ಯಕ್ರಮವನ್ನು ಆಯವ್ಯಯ ಘೋಷಣೆಯಂತೆ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/31/ಪಿಎಫ್‌ಜ/2018, ದಿನಾಂಕ: 30-07-2018 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/494/ವೆಚ್ಚ-4/2018, ದಿನಾಂಕ: 07-08-2018 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/9/18

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

## ಅನುಬಂಧ-2

## ಸಹಾಯಧನ ಮಂಜೂರು ಮಾಡುವ ಕಾರ್ಯವಿಧಾನ

1) ಮೀನುಗಾರಿಕೆ ನಿರ್ದೇಶಕರು ನಿಯಮಾನುಸಾರ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಗುರಿ ನಿಗದಿಪಡಿಸುವುದು.

2) ಇಲಾಖಾಧಿಕಾರಿಗಳು ವ್ಯಾಪಕ ಪ್ರಚಾರ ನೀಡಿ, ಅರ್ಜಿಯನ್ನು ಆಹ್ವಾನಿಸುವುದು.

3) ಮೀನುಗಾರರ ಸಹಕಾರ ಸಂಘವು ತಮ್ಮ ಕೆರೆಗಳಲ್ಲಿ ಬಲಿತ ಮೀನುಮರಿ ಬಿತ್ತನೆ ಮಾಡಲು ಇಚ್ಛೆ ವ್ಯಕ್ತಪಡಿಸಿ, ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ರವರಿಗೆ ನಮೂನೆ-1 ರಲ್ಲಿ ಅರ್ಜಿ ನೀಡುವುದು.

4) ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರು ಅರ್ಜಿ ಮತ್ತು ದಾಖಲಾತಿಗಳನ್ನು ಹಾಗೂ ಕೆರೆಯನ್ನು ಪರಿಶೀಲಿಸಿ ಮೀನು ಕೃಷಿಗೆ ಸೂಕ್ತವೆಂದು ಕಂಡುಬಂದಲ್ಲಿ, ಅರ್ಜಿಯನ್ನು ಶಿಫಾರಸ್ಸು ಮಾಡುವುದು. ವಲಯದ ಮೀನುಗಾರಿಕೆ ಉಪ ನಿರ್ದೇಶಕರು, ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಮತ್ತು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಮಿತಿಯು ಸಂಘಗಳನ್ನು ಆಯ್ಕೆ ಮಾಡತಕ್ಕದ್ದು. ನಿಗದಿಪಡಿಸಿದ ಗುರಿಗಿಂತ ಜಾಸ್ತಿ ಅರ್ಹ ಮೀನುಗಾರಿಕೆ ಸಹಕಾರಿ ಸಂಘಗಳು ಇದ್ದಲ್ಲಿ, ಸಂಘಗಳ ಸಮ್ಮುಖದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡತಕ್ಕದ್ದು ಹಾಗೂ ಒಂದು ತಿಂಗಳ ಒಳಗೆ ಮೀನುಮರಿ ದಾಸ್ತಾನು ಮಾಡಿ ಮೂಲ ಬಿಲ್ಲುಗಳನ್ನು ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸುವಂತೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಯವರು ನಮೂನೆ-2 ರಲ್ಲಿ ಅನುಮತಿ ಪತ್ರ ನೀಡುವುದು.

5) ಮೀನುಗಾರರ ಸಹಕಾರ ಸಂಘವು ನಮೂನೆ-3 ರಲ್ಲಿ ಸೂಕ್ತ ದಾಖಲೆಗಳೊಂದಿಗೆ ಮರುಪಾವತಿಗಾಗಿ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ನಮೂನೆ-3 ರ ಮಾಹಿತಿಯನ್ನು ಭೌತಿಕವಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)ರವರು ಪರಿಶೀಲಿಸಿ, ವಿವರಗಳು ಸರಿಯಿರುವ ಬಗ್ಗೆ ಶಿಫಾರಸ್ಸು ಮಾಡುವುದು ಹಾಗೂ ಮರುಪಾವತಿ ಮಂಜೂರಾತಿಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗೆ ನಮೂನೆ-3 ನ್ನು ಸಲ್ಲಿಸುವುದು.

6) ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವು ಆಯಾ ವಲಯ ಮಟ್ಟದ ಮೀನುಗಾರಿಕೆ ಉಪ ನಿರ್ದೇಶಕರಿಗೆ ಪ್ರದತ್ತವಾಗಿರುತ್ತದೆ.

7) ಮಂಜೂರಾತಿ ಆದನಂತರ ಸಹಾಯಧನವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ನಿಯಮಾನುಸಾರ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದು ಮೀನುಗಾರರ ಸಹಕಾರ ಸಂಘದ ಖಾತೆಗೆ ಜಮಾ ಮಾಡತಕ್ಕದ್ದು.

8) ಮೀನುಗಾರರ ಸಹಕಾರ ಸಂಘವು ಕೆರೆಯಲ್ಲಿ ಬಿತ್ತನೆ ಮಾಡಿದ ಮೀನಿನ ಜಾತಿವಾರು ಪ್ರಮಾಣ, ದಿನಾಂಕ, ವೆಚ್ಚ, ಆಹಾರ ನೀಡಿದ ವಿವರ, ಒಟ್ಟು ವೆಚ್ಚ, ಮೀನು ಹಿಡುವಳಿ (ಜಾತಿ ಮತ್ತು ಗಾತ್ರವಾರು) ಪ್ರಮಾಣ ಇವುಗಳನ್ನು ನೋಂದಣಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಇಲಾಖೆಗೆ ಪ್ರತಿ 2 ತಿಂಗಳಿಗೊಮ್ಮೆ ಮಾಹಿತಿ ನೀಡುವುದು.

9) ಮೀನುಗಾರರ ಸಹಕಾರ ಸಂಘವು ಸಂಪೂರ್ಣ ಮಾಹಿತಿ ನೀಡದಿದ್ದರೆ, ನಿಯಮಾನುಸಾರ ಅನುಷ್ಠಾನಗೊಳಿಸದಿದ್ದರೆ ಕೆರೆ ಗುತ್ತಿಗೆಯನ್ನು ರದ್ದುಪಡಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳುವುದು.

10) ಮೀನುಗಾರರ ಸಹಕಾರ ಸಂಘವು ಮೇಲಿನ ಷರತ್ತಿಗೆ ಒಪ್ಪಿ ಕೆರೆ ಅಭಿವೃದ್ಧಿಪಡಿಸುವ ಬಗ್ಗೆ 200 ರೂ. ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರವನ್ನು ನೀಡುವುದು.

5/9/18

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

05/09/18

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

"ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆ ಸಹಾಯಧನಕ್ಕೆ ಅರ್ಜಿ

## ನಮೂನೆ-1

| | | |
|---|---|---|
| 1. | ಸಂಘದ ಹೆಸರು | |
| 2. | ಪೂರ್ಣ ವಿಳಾಸ | |
| 3. | ಕೆರೆಯ ಹೆಸರು ಮತ್ತು ತಾಲ್ಲೂಕು | |
| 4. | ಜಲವಿಸ್ತೀರ್ಣ (ಹೆ.ಗಳಲ್ಲಿ) | |
| 5. | ಅಚ್ಚುಕಟ್ಟು (ಹೆ.ಗಳಲ್ಲಿ) | |
| 6. | ಉಪಯುಕ್ತತಾ ಜಲವಿಸ್ತೀರ್ಣ (ಹೆ.ಗಳಲ್ಲಿ) | |
| 7. | ಗುತ್ತಿಗೆ ಅವಧಿ (ನವೀಕರಣ ಮತ್ತು ಆದೇಶ ಪ್ರತಿ ಲಗತ್ತಿಸುವುದು) | |
| 8. | ಅ. ಪ್ರಸಕ್ತ ಸಾಲಿನ ಗುತ್ತಿಗೆ ಮೊತ್ತ ಪಾವತಿಸಿರುವ ವಿವರ<br><br>ಆ. ಖರೀದಿಸುವ ಬಲಿತ ಮೀನುಮರಿಗಳ ಸಂಖ್ಯೆ ಮತ್ತು ಮೊತ್ತ (ಬಿತ್ತನೆ ಪ್ರಮಾಣ: 2000 ಸಂಖ್ಯೆ/ಹೆ) | ಮೊತ್ತ:<br>ಚಲನ್ ನಂಬರ್ /<br>ಯು.ಟಿ.ಆರ್. ನಂಬರ್<br>ದಿನಾಂಕ: |
| 9. | ಒಟ್ಟು | |

ದಿನಾಂಕ:

ಸ್ಥಳ:

ಅಧ್ಯಕ್ಷರು / ಕಾರ್ಯದರ್ಶಿ ಸಹಿ

---

### ಶಿಫಾರಸ್ಸು ಪತ್ರ

________________ ಮೀನುಗಾರರ ಸಹಕಾರ ಸಂಘದ ಅರ್ಜಿಯನ್ನು ಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ: ________ ರಂದು ಸ್ವೀಕರಿಸಿದ್ದು, ಕೆರೆಯು ಮೀನು ಕೃಷಿಗೆ ಯೋಗ್ಯವಾಗಿದ್ದು ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಖರೀದಿಸಿದ ಹೂಡಿಕೆಗಳ ವಿವರ

ನಮೂನೆ-2

## ಅನುಮತಿ ಪತ್ರ

ದಿನಾಂಕ:--------------ರಂದು ಮೀನುಗಾರಿಕೆ ಉಪ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆಳಕಂಡ ಸಂಘವನ್ನು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯ ಫಲಾನುಭವಿಯೆಂದು ಆಯ್ಕೆ ಮಾಡಲಾಗಿದೆ.

| ಕ್ರ. ಸಂ. | ಸಂಘದ ಹೆಸರು ಮತ್ತು ವಿಳಾಸ | ಕೆರೆಯ ಹೆಸರು | ದಾಸ್ತಾನು ಮಾಡಬಹುದಾದ ಬಲಿತ ಬಿತ್ತನೆ ಮರಿಗಳ ಗರಿಷ್ಠ ಸಂಖ್ಯೆ* |
|---|---|---|---|
| | | | |
| | | | |

* ಪ್ರತಿ ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣಕ್ಕೆ ಗರಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀರದಂತೆ

ಸದರಿಯವರು ನಿಯಮಾನುಸಾರ ಮೇಲಿನ ಕೆರೆಯಲ್ಲಿ "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ಮೀನು ಕೃಷಿ ಕೈಗೊಳ್ಳಲು ತಿಳಿಸಲಾಗಿದೆ. ಮೀನುಮರಿಗಳನ್ನು ಒಂದು ತಿಂಗಳೊಳಗೆ ನಿಯಮಾನುಸಾರ ದಾಸ್ತಾನು ಮೂಲ ಬಿಲ್ಲುಗಳೊಂದಿಗೆ ಅರ್ಜಿಯನ್ನು ತಾಲ್ಲೂಕು ಮಟ್ಟದ ಅಧಿಕಾರಿಗೆ ಸಲ್ಲಿಸುವುದು.

ಜಿಲ್ಲಾ ಮೀನುಗಾರಿಕೆ ಅಧಿಕಾರಿ

**ಕರ್ನಾಟಕ ಸರ್ಕಾರ**
**(ಮೀನುಗಾರಿಕೆ ಇಲಾಖೆ)**

## ಖರೀದಿಸಿದ ಹೂಡಿಕೆಗಳ ವಿವರ

### ನಮೂನೆ-3

| | | |
|---|---|---|
| 1 | ಖರೀದಿಸಿದ ಬಲಿತ ಬಿತ್ತನೆ ಮೀನುಮರಿ ಸಂಖ್ಯೆ ಮತ್ತು ಮೊತ್ತ (ಬಿಲ್ಲುಗಳನ್ನು ಲಗತ್ತಿಸುವುದು) | |
| | ಅ. ಕಾಟ್ಲ<br>ಆ. ರೋಹು<br>ಇ. ಸಾಮಾನ್ಯಗೆಂಡೆ | |

ದಿನಾಂಕ:
ಸ್ಥಳ:

ಸಂಘದ ಸದಸ್ಯ ಕಾರ್ಯದರ್ಶಿ ಸಹಿ

## ಧೃಡೀಕರಣ

ಮೇಲಿನ ದಾಖಲು ಪತ್ರಗಳನ್ನು ಹಾಗೂ ಕೆರೆಯಲ್ಲಿ ಮೀನುಮರಿ ಬಿತ್ತನೆಯನ್ನು ಖುದ್ದಾಗಿ ಪರಿಶೀಲಿಸಲಾಗಿದ್ದು, ಬಿತ್ತನೆ ಸಮಯದಲ್ಲಿ ವಿಡಿಯೋ ಚಿತ್ರೀಕರಣ ಮಾಡಲಾಗಿದೆ, ಪ್ರಸ್ತಾವನೆಯೊಂದಿಗೆ ಸಲ್ಲಿಸಲಾಗಿದೆ ಎಂದು ಧೃಡೀಕರಿಸಿ ಮುಂದುವರೆದು ಅರ್ಜಿದಾರರು ಈ ಕೆಳಕಂಡ ಸಹಾಯಧನಕ್ಕೆ ಅರ್ಹರಾಗಿದ್ದು, ಸಹಾಯಧನ ಮಂಜೂರು ಮಾಡಬಹುದು.

ಬಲಿತ ಮೀನುಮರಿ ಬಿತ್ತನೆಗೆ ಸಹಾಯಧನ

ಒಟ್ಟು ರೂ:

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2),